## ಕೇಂದ್ರ ಪ್ರಾಯೋಜಿತ ಎಸ್.ಪಿ.ಕ್ಯೂ.ಇ.ಎಂ (ಸ್ಕೀಂ ಫಾರ್ ಪ್ರೋವೈಡಿಂಗ್ ಕ್ವಾಲಿಟಿ ಎಜುಕೇಷನ್ ಇನ್ ಮದರಸಾಸ್) ಯೋಜನೆ:

ಹಿಂದುಳಿದ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಮಕ್ಕಳಿಗೆ ಸಂಪ್ರದಾಯಬದ್ಧ ಹಾಗೂ ಧಾರ್ಮಿಕ ಶಿಕ್ಷಣವನ್ನು ಮದರಸಾ/ಮಕ್ತಬ್/ದಾರೂಲ್ ಉಲೂಮ್‌ಗಳ ಮೂಲಕ ನೀಡಲಾಗುತ್ತಿದೆ. ಈ ಮಕ್ಕಳಿಗೆ ಧಾರ್ಮಿಕ ಶಿಕ್ಷಣದ ಜೊತೆಗೆ ಅವಶ್ಯಕವಾಗಿ ಬೇಕಾಗಿರುವ ಆಧುನಿಕ ಶಿಕ್ಷಣವನ್ನು (ಗಣಿತ, ವಿಜ್ಞಾನ, ಸಮಾಜ, ವಿಜ್ಞಾನ, ಭಾಷೆ) ನೀಡಿ ಮಕ್ಕಳಲ್ಲಿ ವ್ಯಕ್ತಿತ್ವ ವಿಕಾಸಗೊಳಿಸಿ ಅವರನ್ನು ಮುಖ್ಯವಾಹಿನಿಗೆ ತರುವುದಾಗಿದೆ. ಈ ಉದ್ದೇಶದಿಂದ ಕೇಂದ್ರ ಸರ್ಕಾರವು ಇಂತಹ ಮದರಸಾ/ಮಕ್ತಬ್/ದಾರೂಲ್ ಉಲೂಂಗಳ ಶಿಕ್ಷಕರಿಗೆ ವೇತನಾನುದಾನ, ಮೂಲಭೂತ ಅವಶ್ಯಕತೆಗಳಿಗೆ ಕನಿಷ್ಟ ಆರ್ಥಿಕ ಸಹಾಯವನ್ನು ಒದಗಿಸುವ ಕೇಂದ್ರ ಪ್ರಾಯೋಜಿತ ಯೋಜನೆಯೇ ಎಸ್.ಪಿ.ಕ್ಯೂ.ಇ.ಎಂ (ಸ್ಕೀಂ ಫಾರ್ ಪ್ರೋವೈಡಿಂಗ್ ಕ್ವಾಲಿಟಿ ಎಜುಕೇಷನ್ ಇನ್ ಮದರಸಾಸ್) ಯೋಜನೆಯಾಗಿದೆ (ಮಾರ್ಗಸೂಚಿ ಮತ್ತು ನಮೂನೆಗಳಿಗೆ ಎಸ್.ಪಿ.ಕ್ಯೂ.ಇ.ಎಂ ಸೂತ್ತ್ರೋಲೆ ವಿಭಾಗವನ್ನು ವೀಕ್ಷಿಸುವುದು).

## ಕೇಂದ್ರ ಪ್ರಾಯೋಜಿತ ಐ.ಡಿ.ಎಂ.ಐ (ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಇನ್ ಮೈನಾರಿಟಿ ಇನ್ಸಟಿಟ್ಯೂಷನ್) ಯೋಜನೆ.

ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತ ಶಾಲೆಗಳ ಮೂಲಭೂತ ಸೌಕರ್ಯಾಭಿವೃದ್ಧಿಗೆ ಅನುದಾನ ನೀಡಿ, ಈ ಮೂಲಕ ಆಧುನಿಕ ವಿದ್ಯಾಭ್ಯಾಸದಿಂದ ವಂಚಿತರಾಗಿರುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡಿ, ಅವರನ್ನು ಮುಖ್ಯ ವಾಹಿನಿಗೆ ತರುವುದು ಈ ಯೋಜನೆಯ ಮುಖ್ಯ ಉದ್ದೇಶ. ವಿಶೇಷವಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಗುರಿಯನ್ನೂ ಸಹ ಈ ಕೇಂದ್ರ ಪುರಸ್ಕೃತ ಯೋಜನೆಯು ಹೊಂದಿದೆ.

ಈ ಯೋಜನೆಯಡಿಯಲ್ಲಿ ಮತೀಯ ಅಲ್ಪಸಂಖ್ಯಾತ ಶಾಲೆಗಳಲ್ಲಿ ಕಟ್ಟಡ ನಿರ್ಮಾಣ, ಹೆಚ್ಚುವರಿ ತರಗತಿ ಕೊಠಡಿಗಳ ನಿರ್ಮಾಣ, ಶೌಚಾಲಯಗಳ ನಿರ್ಮಾಣ, ವಸತಿ ನಿಲಯಗಳು ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿನಿಯರ ವಸತಿ ನಿಲಯಗಳ ನಿರ್ಮಾಣ, ವಿಜ್ಞಾನ

ಪ್ರಯೋಗಾಲಯ/ಗ್ರಂಥಾಲಯ/ಗಣಕ ಯಂತ್ರ ಪ್ರಯೋಗಾಲಯ ಇತ್ಯಾದಿಗಳ ನಿರ್ಮಾಣ, ಕುಡಿಯುವ ನೀರು ಪೂರೈಕೆ/ವಿಜ್ಞಾನ ಉಪಕರಣಗಳು/ಗ್ರಂಥಾಲಯ ಪುಸ್ತಕಗಳು/ಪೀಠೋಪಕರಣಗಳು/ ಗಣಕ ಯಂತ್ರಗಳು ಇತ್ಯಾದಿ ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿಕೆಯಂತಹ ಮೂಲಭೂತ ಸೌಕರ್ಯಾಭಿವೃದ್ಧಿಗಳನ್ನು ಪರಿಗಣಿಸಲಾಗುತ್ತದೆ. ಇವುಗಳ ಹೊರತಾಗಿ ಕರ್ನಾಟಕ ರಾಜ್ಯ ಗ್ರಾಂಟ್–ಇನ್–ಏಡ್ ಕಮಿಟಿ ಶಿಫಾರಸ್ಸು ಮಾಡುವ ಇತರೆ ಮೂಲಭೂತ ಸೌಕರ್ಯಗಳನ್ನೂ ಸಹ ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

## ಕೇಂದ್ರ ಪ್ರಾಯೋಜಿತ ಐ.ಇ.ಡಿ.ಎಸ್.ಎಸ್ (ಇನ್‌ಕ್ಲೂಸಿವ್ ಎಜುಕೇಷನ್ ಫಾರ್ ಡಿಸೆಬಲ್ಡ್ ಇನ್ ಸೆಕೆಂಡರಿ ಸ್ಟೇಜ್) ಯೋಜನೆ:

ಪ್ರೌಢ ಶಾಲಾ ಹಂತದಲ್ಲಿ ವಿಕಲಚೇತನರಿಗೆ ಸಮನ್ವಯ ಶಿಕ್ಷಣವನ್ನು ಸಂಪೂರ್ಣವಾಗಿ ಕೇಂಧ್ರ ಸರ್ಕಾರದ ಅನುದಾನದಲ್ಲಿ ನಡೆಯುವ ಒಂದು ಕಾರ್ಯಕ್ರಮವಾಗಿದೆ. ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳು ತಮ್ಮ ಪ್ರೌಢ ಶಿಕ್ಷಣವನ್ನು ಸಾಮಾನ್ಯ ಶಾಲೆಗಳಲ್ಲಿ ಪಡೆಯಲು ಅವಕಾಶ ಕಲ್ಪಿಸುವುದು, ಮತ್ತು ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದು, ಹಾಗೂ ವಿಶೇಷ ಸಂಪನ್ಮೂಲ ಶಿಕ್ಷಕರ ಆಯ್ಕೆ, ಸಂಪನ್ಮೂಲ ಕೇಂಧ್ರಗಳ ಬಲವರ್ಧನೆ, ಪರಿಸರ ಸ್ನೇಹಿ ವಾತಾವರಣವನ್ನು ಕಲ್ಪಿಸುವುದು

**ಐ.ಇ.ಡಿ.ಎಸ್.ಎಸ್.ಮಕ್ಕಳ ಶೈಕ್ಷಣಿಕ ಅಭಿವೃದ್ದಿಗಾಗಿ ಹಮ್ಮಿಕೊಳ್ಳಲಾಗುವ ಚಟುವಟಿಕೆಗಳು:–**

1. ವೈದ್ಯಕೀಯ ತಪಾಸಣೆ.
2. ಸಾಧನ ಸಲಕರಣೆಗಳು.
3. ಪುಸ್ತಕ ಮತ್ತು ಇತರೆ ಲೇಖನ ಸಾಮಗ್ರಿಗಳು
4. ಸಾರಿಗೆ ಹಾಗೂ ಎಸ್ಕಾರ್ಟ್ ಭತ್ಯೆ.
5. ಹೆಣ್ಣು ಮಕ್ಕಳಿಗೆ ವಿಶೇಷ ಭತ್ಯೆ.
6. ರೀಡರ್ ಭತ್ಯೆ.

**ಇತರೆ ಅಂಶಗಳು :–**

- ಪರಿಸರ ಸ್ನೇಹಿ ವಾತಾವರಣ.
- ವಿಶೇಷ ಹಾಗೂ ಸಾಮಾನ್ಯ ಶಿಕ್ಷಕರಿಗೆ ತರಬೇತಿ.

- ಮುಖ್ಯಶಿಕ್ಷಕರಿಗೆ ಆಡಳಿತಾಧಿಕಾರಿಗಳಿಗೆ, ಪೋಷಕರಿಗೆ, ಪುನಶ್ಚೇತನ ತರಬೇತಿ.
- ತರಬೇತಿ ಸಂಸ್ಥೆಗಳ ಬಲವರ್ಧನೆ ಹಾಗೂ ಸ್ವಯಂಸೇವಾ ಸಂಸ್ಥೆಗಳ ಸಹಕಾರ.
- ಸಂಪನ್ಮೂಲ ಕೊಠಡಿಗೆ ಸಾಮಗ್ರಿಗಳು.
- ವಿಶೇಷ ಸಂಪನ್ಮೂಲ ಶಿಕ್ಷಕರ ಆಯ್ಕೆ.
- ಸಂಶೋಧನೆ, ಮೇಲುಸ್ತುವಾರಿ ಹಾಗೂ ಮೌಲ್ಯಮಾಪನ.